# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉದ್ರಿ



**ಧ್ಯೇಯವಾಕ್ಯ :**

ನಿಮ್ಮ  ಮಗುವಿನ ಶಿಕ್ಷಣದ ಕನಸು,

ಆಗುವುದು ನಮ್ಮ ಶಾಲೆಯಿಂದ ನನಸು.

## ಚಾರಿತ್ರಿಕ ಹಿನ್ನಲೆ

ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕಿನ ಹೃದಯ ಭಾಗದಲ್ಲಿರುವ ಉದ್ರಿಯು ಮೂಲತಃ ಚುಟು ಶಾತವಾಹನರಿಂದ ಆಳಲ್ಪಟ್ಟ ಪ್ರದೇಶವಾಗಿದ್ದು ಇದು ಪ್ರಥಮ ಕನ್ನಡ ಸಾಮ್ರಾಜ್ಯ ಸ್ಥಾಪಕರಾದ ಬನವಾಸಿಯ ಕದಂಬರ, ಬಾದಾಮಿ ಚಾಲುಕ್ಯರ, ಮಾಳಖೇಡದ ರಾಷ್ಟ್ರಕೂಟರ ,ಕಲ್ಯಾಣಿ ಚಾಲುಕ್ಯರ, ಕಲಚೂರ್ಯರ, ದ್ವಾರಸಮುದ್ರ ಹೊಯ್ಸಳರ, ಮತ್ತು ವಿಜಯನಗರ ಅರಸರ ಆಡಳಿತಕ್ಕೆ ಒಳಪಟ್ಟಿತ್ತು.

ಉದ್ರಿಯನ್ನು ಶಾಸನಗಳಲ್ಲಿ ಉದ್ದುರ, ಉದ್ದುರೆ ಹಾಗೂ ಉದ್ದಾರಪುರವೆಂದು ಕರೆಯಲಾಗಿದ್ದು ತಿಳಿದು ಬರುತ್ತದೆ. ಈ ಪ್ರದೇಶವು ಜಿದ್ದುಲಿಗೆ ನಾಡಿನ ಒಂದು ಪ್ರಮುಖ ಕೇಂದ್ರವಾಗಿದ್ದು ಕ್ರಿ.ಶ.12 ನೇ ಶತಮಾನದಲ್ಲಿ

ಹೊಯ್ಸಳ ವೀರ ಬಲ್ಲಾಳನ ಕಾಲದಲ್ಲಿ ಬನವಾಸಿಯ ಒಂದು ಪ್ರಾದೇಶಿಕ ಕೇಂದ್ರವಾಗಿತ್ತು. ಇಲ್ಲಿ ಕ್ರಿ.ಶ.12 ನೇ ಶತಮಾನಕ್ಕೆ ಸೇರಿದ ಶಿವದೇವಾಲಯವಿದ್ದು ಇದು ತಳವಿನ್ಯಾಸದಲ್ಲಿ ಗರ್ಭಗೃಹ ಸುಖನಾಸಿ ಮತ್ತು ನವರಂಗವನ್ನು ಒಳಗೊಂಡಿದ್ದು, ಇದು ಮೂಲತಃ ಜೈನ ದೇವಾಲಯವಾಗಿದೆ. ಈ ಸ್ಥಳದಲ್ಲೆ ಹಲವಾರು ಶಾಸನಗಳು, ಬಸದಿಗಳೂ ವೀರಗಲ್ಲುಗಳೂ ಹಾಗೂ ಮಹಾಸತಿಕಲ್ಲುಗಳು ಇವೆ. ಜೈನ ಮುನಿಗಳು ಸಲ್ಲೇಖನ ವ್ರತವನ್ನು ಆಚರಿಸಿದ ಬಗ್ಗೆ ಇಲ್ಲಿ ದೊರೆತಿರುವ ಕ್ರಿ.ಶ.9 ರಿಂದ 12 ನೇ ಶತಮಾನಕ್ಕೆ ಸೇರಿದ ಶಾಸನಗಳಿಂದ ತಿಳಿದು ಬಂದಿದೆ.

ಈ ವಿವರಗಳನ್ನು ಶಾಲೆಯಿಂದ ಸ್ಥಳೀಯ ದೇವಸ್ಥಾನಗಳಿಗೆ ಭೇಟಿಕೊಟ್ಟು ಸಂಗ್ರಹಿಸಿದಾಗ ಪಡೆದ ನೆನಪಿನ ಝಲಕ್.........






ಶಾಲೆಯ ಐತಿಹಾಸಿಕ ಹಿನ್ನಲೆ.....................

1958–59 ರಲ್ಲಿ ಪ್ರಾರಂಭವಾದ ನಮ್ಮ ಶಾಲೆಯು ಹಂತಹಂತವಾಗಿ ಸರ್ವರಂಗಗಳಲ್ಲಿ ಮುಂದುವರೆಯುತ್ತಾ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾ, ಇಲಾಖೆ ಹಾಗೂ ಸಮುದಾಯದ ಸಹಕಾರದೊಂದಿಗೆ ತನ್ನದೇ ಆದ ಸ್ವಂತ ಕಟ್ಟಡ ಹಾಗೂ ಸ್ವಂತ ಆಸ್ತಿಯನ್ನು ಹೊಂದಿ ದೇಶಕ್ಕೆ ಬೇಕಾದ ಉತ್ತಮ ನಾಗರೀಕರನ್ನು ನಿರ್ಮಿಸುವಲ್ಲಿ ತನ್ನ ಪ್ರಭಾವವನ್ನು ಬೀರುತ್ತಾ ಮುನ್ನಡೆಯುತ್ತಿದೆ. ಅನೇಕ ವಿದ್ಯಾವಂತರನ್ನು, ಸಮಾಜದಲ್ಲಿ ಉತ್ತಮ ಹೆಸರು ಮಾಡಿರುವ ಪ್ರಜೆಗಳನ್ನು ನೀಡಿದ ಕೀರ್ತಿ ನಮ್ಮ ಶಾಲೆಗಿದೆ.

ಪ್ರಸ್ತುತ 300 ಕುಟುಂಬಗಳನ್ನು ಹೊಂದಿರುವಂತಹ ಈ ಗ್ರಾಮದಲ್ಲಿ 548 ಗಂಡು, ಹಾಗೂ 542 ಹೆಣ್ಣು ಒಟ್ಟು 1090 ಜನ ವಾಸಿಸುತಿದ್ದಾರೆ. ಈ ಶಾಲೆಯು ಸಮೂಹ ಸಂಪನ್ಮೂಲ ಕೇಂದ್ರದ ಕೇಂದ್ರ ಶಾಲೆಯಾಗಿದ್ದು ಇಲ್ಲಿ ಕೇವಲ ಉದ್ರಿ ಗ್ರಾಮದ ಮಕ್ಕಳಲ್ಲದೆ ಪಕ್ಕದ ಗ್ರಾಮಗಳಾದ ಮಂಚಿ, ಯಡಗೊಪ್ಪ, ಯಲವಾಟ, ಗುಡ್ಡೆಕೊಪ್ಪ ಹಾಗೂ ಇನ್ನಿತರ ಗ್ರಾಮಗಳಿಂದ ಮಕ್ಕಳು ನಮ್ಮ ಶಾಲೆಗೆ ದಾಖಲಾಗುತ್ತಿದ್ದಾರೆ. ಉತ್ತಮ ಧ್ಯೇಯವಾಕ್ಯ, ಸಂಪನ್ಮೂಲಭರಿತ ಶಿಕ್ಷಕರು, ಸುವ್ಯವಸ್ಥಿತವಾದ ವಾತಾವರಣ, ಕ್ರಿಯಾಶೀಲ ಎಸ್,ಡಿ,ಎಮ್,ಸಿ. ಶಾಲೆಯ ಸೇವೆಗೆ ಸದಾ ಟೊಂಕ ಕಟ್ಟಿ ನಿಂತಿರುವ ಹಳೆ ವಿದ್ಯಾರ್ಥಿಗಳ ಸಂಘ, ವಿದ್ಯಾರ್ಥಿಗಳ ಕನಸುಗಳನ್ನು ಈಡೇರಿಸಲು ಸನ್ನದ್ಧವಾಗಿರುವ 9 ಕೊಠಡಿಗಳು, ಶಾಲೆಯ ಅಂದ ಹೆಚ್ಚಿಸುತ್ತಿರುವ ಕೈತೋಟ, ಉತ್ತಮ ಆಟದ

ಮೈದಾನಗಳಿಂದ ಸಮೃದ್ದವಾಗಿರುವ ನಮ್ಮ ಶಾಲೆ ಕಳೆದ ಶೈಕ್ಷಣಿಕ ವರ್ಷದಲ್ಲಿ ಪ್ರತಿಭಾ ಕಾರಂಜಿ ಹಾಗೂ ಕ್ರೀಡಾಕೂಟಗಳಲ್ಲಿ ತಾಲೂಕು ಮಟ್ಟದಲ್ಲಿ ಹೆಸರು ಮಾಡಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ.



***ಹೊರನೋಟದಿಂದ ಕಣ್ಣನ ಸೆಳೆಯುತ್ತಿರುವ ನಮ್ಮ ಶಾಲೆ.***

2017–18 ನೇ ಸಾಲಿನಲ್ಲಿ ***ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ***ವನ್ನು ಆಯೋಜನೆ ಮಾಡಿದ್ದು, ಇಲಾಖೆ ಹಾಗೂ ಸಮುದಾಯದ ಸಹಕಾರದೊಂದಿಗೆ ಅದ್ದೂರಿಯಾಗಿ ನೆರವೇರಿದ ಕ್ಷಣಗಳು....




# ಸಾಧನೆಯತ್ತ ನಮ್ಮ ಶಾಲೆ...



ಎಸ್,ಡಿ,ಎಮ್,ಸಿ ಪೋಷಕರು ಹಾಗೂ ಹಳೆ ವಿದ್ಯಾರ್ಥಿಗಳ ಸಂಘದ ಸಹಭಾಗಿತ್ವದಲ್ಲಿ ನಮ್ಮಶಾಲೆಗೆ 2 ಕಂಪ್ಯೂಟರ್ ಹಾಗೂ ಪ್ರೋಜೆಕ್ಟರ್ ಮತ್ತು ಮೈಕ್ ಸೆಟ್ ನ್ನು ಸುಮಾರು 2,10,000 (ಎರಡು ಲಕ್ಷದ ಹತ್ತುಸಾವಿರ)ರೂಗಳು ಬೆಲೆ ಬಾಳುವ ಸಾಮಾಗ್ರಿಗಳನ್ನು ನಮ್ಮ ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್ ನಡೆಸಲು ದಾನವಾಗಿ ಪಡೆದು ಸ್ಮಾರ್ಟ್ ಕ್ಲಾಸ್ ಗಳನ್ನು ಆರಂಭಿಸಿದೆ.

ಜನವರಿ 26 ; 2018 ರ ಗಣರಾಜ್ಯೋತ್ಸವ ದಿನಾಚರಣೆಯಂದು ಅದ್ದೂರಿಯಾಗಿ ಕಾರ್ಯಕ್ರಮವನ್ನು ಆಯೋಜನೆ ಮಾಡಿ ಮೇಲ್ಕಾಣಿಸಿದ ವಸ್ತುಗಳನ್ನು ಸನ್ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಉದ್ಘಾಟಿಸಿ ಸಾರ್ಥಕಪಡಿಸಿದ ನೆನಪುಗಳ ಚಿತ್ರಾವತರಣಿಕೆಗಳು........





ಸ್ಮಾರ್ಟಕ್ಲಾಸ್ ಪ್ರೊಜೆಕ್ಟರ್ ,ಮೂಲಕ ಶಿಕ್ಷಣ ಪಡೆಯುತ್ತಿರುವ ಮಕ್ಕಳು

ಕಂಪ್ಯೂಟರ್ ಶಿಕ್ಷಣ ನೀಡುತ್ತಿರುವ ಶಿಕ್ಷಕ ವರ್ಗ :







ಬಿಸಿಯೂಟಕ್ಕೆ ಜೈವಿಕ
ಕೃಷಿಯ ಮೂಲಕ ನಮ್ಮ
ಮಕ್ಕಳೇ ಬೆಳೆಸಿದ ತರಕಾರಿಗಳು
ಅದು ನಮ್ಮ ಶಾಲಾ ಕೈತೋಟದಲ್ಲೇ



ಬಿಸಿಯೂಟ ಕಾರ್ಯಕರ್ತರ ಧರಣಿ
ಸಂದರ್ಭದಲ್ಲಿ ಬಿಸಿಯೂಟ ಸಿಬ್ಬಂದಿಯವರು
ಗೈರಾದರೂ ಬಿಸಿಯೂಟ ನಿರ್ವಹಣೆ
ಮಾಡುತ್ತಿರುವ ನಮ್ಮೂರಿನ ಗ್ರಾಮಸ್ಥರು..

## ಕ್ರೀಡಾಕೂಟ

ವಲಯ ಮಟ್ಟದ ಕ್ರೀಡಾಕೂಟದಲ್ಲಿ
ಹಲವಾರು ಪ್ರಶಸ್ತಿ ಗಳಿಸಿ , ತಾಲ್ಲೂಕು
ಮಾಟ್ಟದಲ್ಲೂ ಉತ್ತಮ ಸಾಧನೆಗೈದ ಮಕ್ಕಳಿಗೆ




## ಯುವಚೇತನದಡಿ.....



ಕ್ರೀಡಾಸಾಮಾಗ್ರಿಗಳನ್ನು ದಾನವಾಗಿ ಪಡೆದ ಮೊತ್ತ 40,000 ರೂ ಗಳೊಂದಿಗೆ..

ಶಾಲಾ ಪ್ರಾಂಭೋತ್ಸವದ ಸಿಹಿ ನೆನಪು.






ಶೈಕ್ಷಣಿಕ ಚಿತ್ರಾಲಯದ ಮೇಲ್ಚಾವಣಿ ಅಂದವಾಗಿ ಕಾಣಲು ಮಾಡಿರುವ ಫೈಬರ್ ಸೀಲಿಂಗ್ : ವೆಚ್ಚ 35,000 ರೂಗಳು.














2018–19 ನೇ ಸಾಲಿನಲ್ಲಿ ವ್ಯವಸ್ಥೆ ಮಾಡಿರುವ 3 ಕೆ,ವಿ ಯುಪಿಎಸ್ , ಹಾಗೂ 4★100 ಕೆವಿ ಬ್ಯಾಟರಿ ; ನಾನ್ ಸ್ಟಾಪ್ ವರ್ಕಿಂಗ್ ಫಾರ್ 24 ಹವರ್ಸ (ಅಂದಾಜು ವೆಚ್ಚ : 52,000 ರೂ )



೭ ಡೆಸ್ಕಟಾಪ್ ಕಂಪ್ಯೂಟರ್ (ಡೆಲ್ , ಹೆಚ್ ಪಿ) , ಇಂಟೆಕ್ಸ ಹೋಮ್ ಥಿಯೇಟರ್ ವಿತ್ ೭ ಸ್ಪೀಕರ್ಸ (ಅಂದಾಜು ಮೊತ್ತ ; 50,000 ರೂಗಳು)



ಪ್ರೊಜೆಕ್ಟರ್ ಪ್ರದರ್ಶನಕ್ಕಾಗಿ ಸ್ಕ್ರೀನ್ ಬದಲಿಗೆ ಶಾಶ್ವತವಾಗಿರುವಂತೆ ವ್ಯವಸ್ಥೆಮಾಡಲಾಗಿರುವ 10★10 ಅಳತೆಯ ಕಾಂಕ್ರೀಟ್ ಸ್ಕ್ರೀನ್ ( ಮೊತ್ತ : 10,000 ರೂಗಳು )




***ಸೌಂಡ್ ಬಾಕ್ಸ ನ ಗುಣಮಟ್ಟ ಹೆಚ್ಚಿಸಲು ವ್ಯವಸ್ಥೆ ಮಾಡಲಾಗಿರುವ*** ಆಂಪ್ಲಿಪ್ಲೇಯರ್



**ಸುಸಜ್ಜಿತವಾದ ಶಾಲಾ ಕೈತೋಟ ನಿರ್ಮಾಣ ಹಾಗೂ ತರಕಾರಿ , ಸೊಪ್ಪು ,ಬಾಳೆ ,ತೆಂಗು ಮರಗಳನ್ನು ಬೆಳೆಸಿ ಬಿಸಿಯೂಟಕ್ಕೆ ಬಳಕೆ ಮಾಡುತ್ತಿರುವುದು.**

ಮುಕ್ತಾಯದ ಮುನ್ನ ................

ಅನೇಕ ಸಾಧನೆಗಳನ್ನು ಮಾಡುತ್ತಾ  ಇಂದಿನ ಖಾಸಗಿ ಶಾಲೆಗಳ ಪೈಪೋಟಿಗಳ ಮಧ್ಯೆಯೂ  ತನ್ನದೇ ವರ್ಚಸ್ಸನ್ನು ಮೂಡಿಸುತ್ತಾ  ಮುನ್ನುಗ್ಗುತ್ತಿರುವ ನಮ್ಮ ಶಾಲೆಯ ಯಶೋಗಾಥೆಗೆ ಸಹಕಾರವನ್ನು ನೀಡುತ್ತಿರುವ ನಮ್ಮ ಇಲಾಖೆಯ ಎಲ್ಲಾ ಅಧಿಕಾರಿಗಳಿಗು, ಎಸ,ಡಿ,ಎಮ್,ಸಿ ಯ ಸದಸ್ಯರಿಗೂ, ಹಳೆ ವಿದ್ಯಾರ್ಥಿಗಳ ಸಂಘದ ಸದಸ್ಯರಿಗೂ, ದಾನಿಗಳಿಗೂ ನಮ್ಮ ಶಾಲೆಯ ಮಕ್ಕಳು, ಪೋಷಕರು ಹಾಗೂ ಶಿಕ್ಷಕರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ ಮುಂದಿನ ಯಶೋಗಾಥೆಗೆ ಸನ್ನದ್ಧರಾಗುತಿದ್ದೇವೆ  ಎಂಬ ಆಶಾಭಾವನೆಯೊಂದಿಗೆ...........

